ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

ಸಿ. ಸಿ. ನಂ.**801/2024**

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ನಾಗಪ್ಪ ಬೆಟಗೇರಿ | ಪಿಡಬ್ಲ್ಯೂ | **7** |
| ತಂದೆಃಗಂಡನ ಹೆಸರು | : | ಗುಡ್ಡಪ್ಪ | ಸಿಡಬ್ಲ್ಯೂ | **13** |
| ವಯಸ್ಸು | : | 55 ವರ್ಷ | | |
| ಉದ್ಯೋಗ | : | ಮುಖ್ಯ ಪೇದೆ | | |
| ವಾಸಸ್ಥಳ | : | ಹಾನಗಲ್ | | |

ದಿನಾಂಕ **03.04.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ

ನಾನು 2021 ರಿಂದ ಇಲ್ಲಿಯವರೆಗೆ ಹಾನಗಲ್ ಠಾಣೆಯಲ್ಲಿ ಮುಖ್ಯ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 10.07.2023 ರಂದು ನಾನು ಎಸ್ ಎಚ್ ಓ ಕರ್ತವ್ಯದಲ್ಲಿದ್ದಾಗ ಸಾಯಂಕಾಲ 6.00 ಗಂಟೆ ಸುಮಾರಿಗೆ ಚಾಸಾ 1 ರವರು ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಖ್ಯೆ 163/2023 ರಲ್ಲಿ ಪ್ರಕರಣ ದಾಖಲಿಸಿ, ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿಃ 11.07.2023 ರಂದು ಘಟನಾ ಸ್ಥಳಕ್ಕೆ ಹೋಗಿ ಚಾಸಾ-5 ರವರು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಘಟನಾ ಜಾಗೆಯ ಪಂಚನಾಮೆಯನ್ನು ಮುಂಜಾನೆ 9.00 ರಿಂದ 10.00 ಗಂಟೆಯವರೆಗೆ ಮಾಡಿ ಆ ಕಾಲಕ್ಕೆ ಪೊಟೋ ತೆಗೆಸಿ ಹಾತನಕಾಶೆ ತಯಾರಿಸಿರುತ್ತೇನೆ. ಅದೇ ದಿನ ಕೆ.ಎಸ್ ಆರ್ ಟಿ ಸಿ ಬಸ್ ನಂ. ಕೆಎ-27 ಎಫ್ 509 ನ್ನು ಚಾಸಾ-5 ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು 10.30 ರಿಂದ 11.30 ರವರೆಗೆ ಮಾಡಿರುತ್ತೇನೆ. ಪೋಲಿಸ್ ಠಾಣೆಯಲ್ಲಿ ಪಂಚನಾಮೆ ಮಾಡಿರುತ್ತೇನೆ. ಆ ಕಾಲಕ್ಕೆ ಪೊಟೋ ತೆಗೆದಿರುತ್ತೇವೆ. ದಿಃ 11.07.2023 ರಂದು ಚಾಸಾ-4 ರಿಂದ 9 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ 18.08.2023 ರಂದು ಚಾಸಾ -4 ಮತ್ತು 10 ರವರ ಹೇಳಿಕೆ ಪಡೆದಿರುತ್ತೇನೆ. ಸರಕಾರಿ ಆಸ್ಪತ್ರೆಯಿಂದ ಚಾಸಾ-4 ರವರ ಗಾಯದ ಪ್ರಮಾಣಪತ್ರ ಪಡೆದಿರುತ್ತೇನೆ. ಆರ್ ಟಿ ಓ ಗೆ ವಾಹನ ಪರೀಶಿಲನೆ ಕುರಿತು ಪತ್ರ ಬರೆದಿರುತ್ತೇನೆ. ದಿಃ

15.07.2023 ರಂದು ಆರ್ ಟಿ ಓ ಅವರಿಂದ ಐ ಎಂ ವಿ ವರದಿ ಪಡೆದಿರುತ್ತೇನೆ. ಹಾನಗಲ ಕೆ ಎಸ್ ಆರ್ ಟಿ ಸಿ ಘಟಕದ ವ್ಯವಸ್ಥಾಪಕರಿಗೆ ಕಲಂ 133 ರಡಿಯಲ್ಲಿ ನೋಟಿಸು ನೀಡಿರುತ್ತೇನೆ. ದಿಃ 12.07.2023 ರಂದು ಘಟಕದ ವ್ಯವಸ್ಥಾಪಕರು ಬಂದು ಹಾಜರಾಗಿ ನೋಟಿಸಿಗೆ ಉತ್ತರ ನೀಡಿ ದಾಖಲೆ ಹಾಜರುಪಡಿಸಿರುತ್ತಾರೆ. ಚಾಲಕನ ಹಾಜರಾತಿ ಪ್ರಮಾಣಪತ್ರ ಪಡೆದಿರುತ್ತೇನೆ. 65 ಬಿ ಪ್ರಮಾಣಪತ್ರವನ್ನು ಪಡೆದಿರುತ್ತೇನೆ. ಆರೋಪಿ ಠಾಣೆಗೆ ಬಂದರು. ದಸ್ತಗಿರಿ ನಿಯಮ ಪಾಲಿಸಿ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ತಾಲೂಕಾ ಆಸ್ಪತ್ರೆಯಿಂದ ಚಾಸಾ-4 ರವರ ಗಾಯದ ಪ್ರಮಾಣಪತ್ರ ಪಡೆದಿರುತ್ತೇನೆ. ತನಿಖೆ ಮುಗಿದಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ನಾನು ಸ್ವೀಕರಿಸಿದ ದೂರು ನಿ ಪಿ 1 ಎಂದು ಈಗಾಗಲೇ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು. 4 ಪೋಟೋಗಳನ್ನು ನಿಪಿ-2 ಎಂದು ಈಗಾಗಲೇ ಗುರುತಿಸಲಾಗಿದೆ. ಘಟನಾ ಸ್ಥಳದ ಪಂಚನಾಮೆಯನ್ನು ನಿ ಪಿ 3 ಎಂದು ಈಗಾಗಲೇ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ ಪಿ 3(ಸಿ) ಎಂದು ಗುರುತಿಸಲಾಯಿತು. 3 ಪೋಟೋಗಳನ್ನು ನಿಪಿ-4 ಎಂದು ಈಗಾಗಲೇ ಗುರುತಿಸಲಾಗಿದೆ. ಅಪಘಾತಕ್ಕೆ ಈಡಾದ ವಾಹನಗಳ ಪರಿಶೀಲನಾ ಪಂಚನಾಮೆಯನ್ನು ನಿ ಪಿ 5 ಎಂದು ಈಗಾಗಲೇ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ ಪಿ 5(ಬಿ) ಎಂದು ಗುರುತಿಸಲಾಯಿತು. ಗಾಯದ ಪ್ರಮಾಣಪತ್ರವನ್ನು ನಿ ಪಿ 6 ಎಂದು ಈಗಾಗಲೇ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ ಪಿ 6(ಬಿ) ಎಂದು ಗುರುತಿಸಲಾಯಿತು. ಹಾತನಕಾಶೆಯನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿ ಪಿ 8(ಎ) ಎಂದು ಗುರುತಿಸಲಾಯಿತು. ಐ ಎಂ ವಿ ವರದಿಯನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿ ಪಿ 9(ಎ) ಎಂದು ಗುರುತಿಸಲಾಯಿತು. ಇಂಡಮಿನಿಟಿ ಬಾಂಡನ್ನು ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿ ಪಿ 10(ಎ) ಎಂದು ಗುರುತಿಸಲಾಯಿತು. 65 ಬಿ ಪ್ರಮಾಣಪತ್ರವನ್ನು ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಯಿತು. ಸಿಡಿಯನ್ನು ನಿಪಿ-12 ಎಂದು ಗುರುತಿಸಲಾಯಿತು.

ಪಾಟೀ ಸವಾಲು **:** ಆರೋಪಿ ಪರ ಶ್ರೀ.ಎಸ್ ಎಂ ಕೆ ವಕೀಲರಿಂದ

ಘಟನಾ ಜಾಗೆಯ ಪಂಚನಾಮೆಯನ್ನು ಮುಂಜಾನೆ 9.00 ರಿಂದ 10.00 ಗಂಟೆಯವರೆಗೆ ಮಾಡಿರುತ್ತೇನೆ. ಘಟನಾ ಜಾಗೆಯ ಚಕಬಂದಿ ಹೇಳಲು ಬರುತ್ತದೆ. ಉತ್ತರಕ್ಕೆ ತಡಸ ಕಡೆಗೆ ಹೋಗುವ ರಸ್ತೆ, ದಕ್ಷಿಣಕ್ಕೆ ಗೊಂದಿ ಕಡೆ ಹೋಗುವ ರಸ್ತೆ, ಪೂರ್ವಕ್ಕೆ ಪುರಸಭೆ, ಪಶ್ಚಿಮಕ್ಕೆ

ಪಾದಗಟ್ಟಿ ಇರುತ್ತದೆ. ತಡಸ ಗೊಂದಿ ರಸ್ತೆ 40 ಅಡಿ ಅಗಲ ಇದೆ. ಕಚ್ಚಾ ರೋಡ್ ಅಳತೆಯನ್ನು ಬರೆದಿರುವುದಿಲ್ಲ. ಪಂಚರನ್ನು ನಾನೇ ಕರೆದುಕೊಂಡು ಬಂದಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಖಾಲಿ ಹಾಳೆ ಮೇಲೆ ಸಹಿ ಪಡೆದು ಠಾಣೆಯಲ್ಲಿ ಕುಳಿತು ಪಂಚನಾಮೆ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಪಂಚನಾಮೆ ವಸ್ತುಸ್ಥಿತಿಗೆ ವಿರುದ್ದವಾಗಿದೆ ಎಂದರೆ ಸರಿಯಲ್ಲ. ಘಟನಾ ಪಂಚನಾಮೆಗೂ ಆರೋಪಿಗೂ ಯಾವುದೇ ರೀತಿ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಹಾತನಕಾಶೆ ವಸ್ತುಸ್ಥಿತಿಗೆ ವಿರುದ್ದವಾಗಿದೆ ಎಂದರೆ ಸರಿಯಲ್ಲ. ಜಪ್ತಿಪಂಚನಾಮೆಗೂ ಸಹ ಖಾಲಿ ಹಾಳೆ ಮೇಲೆ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಸಹಾಯ ಮಾಡಲು ಖೊಟ್ಟಿ ಪಿರ್ಯಾದಿ ಪಡೆದು ಖೊಟ್ಟಿ ದಾಖಲೆಯನ್ನು ಸೃಷ್ಟಿ ಮಾಡಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್